OS No. 88/2022

DW-1

**(ಇಂದು ದಿಃ 19-04-2025 ರಂದು ಸಾಕ್ಷಿಯನ್ನು ಕರೆಯಿಸಿ ಪ್ರಮಾಣ ವಚನ ಭೋಧಿಸಲಾಯಿತು)**

**<u>ಪಾಟೀ ಸವಾಲುಃ- ವಾದಿ ಪರ ಶ್ರೀ. BS ವಕೀಲರಿಂದಃ-</u>**

1ನೇ ವಾದಿ ನನ್ನ ಸಂಬಂಧಿ ಅಲ್ಲ, ಒಂದೇ ಜಾನಾಂಗದವರು. ವಾದಿಯರು ನಮ್ಮ ಗ್ರಾಮದವರು ಅವರು ನನಗೆ ಪರಿಚಯ ಇದ್ದಾರೆ. ದಾವಾ ಜಮೀನುಗಳು ಮೂಲತಃ ಬಸಪ್ಪ ತಂದೆ ಬಸಪ್ಪ ರವರಿಗೆ ಸೇರಿತ್ತು. ಬಸಪ್ಪ ತಂದೆ ಬಸಪ್ಪನಿಗೆ 3 ಜನ ಗಂಡು ಮಕ್ಕಳು. ಅವುರುಗಳೆಂದರೆ ದೊಡ್ಡ ಶರಣಪ್ಪ ಮಾಹಾದೇವಪ್ಪ ಮತ್ತು ಸಣ್ಣ ಶರಣಪ್ಪ, ಸಣ್ಣ ಶರಣಪ್ಪ ಮಕ್ಕಳು ಇಲ್ಲದೆ ತೀರಿಹೋಗಿದ್ದಾರೆ. ನನಗೆ ಶರಣಪ್ಪನ ಹೆಂಡತಿ ಹೆಸರು ಗೊತ್ತಿಲ್ಲ, ಬಸಪ್ಪ ತಂದೆ ಬಸಪ್ಪನ ಹೆಂಡತಿ ಹೆಸರು ನೀಲಮ್ಮ ಎಂದರೆ ಸರಿಯಲ್ಲ, ಸಾಕ್ಷಿ ಮುಂದುವರೆದು ರಾಚಮ್ಮ ಎಂದು ಹೇಳುತ್ತಾರೆ. ಬಸಪ್ಪನ ಹೆಂಡತಿ ಹೆಸರು ರಾಚಮ್ಮ ಎಂದು ತೋರಿಸಾಲು ನಾನು ದಾಖಲಾತಿ ಹಾಜರುಪಡಿಸಿಲ್ಲ, ಬಸಪ್ಪ ತಂದೆ ಬಸಪ್ಪ ನಿಗೆ ಸೂಗಮ್ಮ ಮತ್ತು ಈರಮ್ಮ ಎಂಬ ಇಬ್ಬರು ಹೆಣ್ಣು ಮಕ್ಕಳು ಎಂದರೆ ನನಗೆ ಗೊತ್ತಿಲ್ಲ, ಸೂಗಮ್ಮಳ ಗಂಡ ಸಣ್ಣ ಬಸಪ್ಪ ಎಂದರೆ ಸರಿಯಲ್ಲ, ಬಸಪ್ಪ ತಂದೆ ಬಸಪ್ಪನ 2ನೇ ಮಗಳು ಈರಮ್ಮರವರನ್ನು ಗುರುಲಿಂಗಪ್ಪರವರಿಗೆ ಮದುವೆ ಮಾಡಿಕೊಟ್ಟಿದ್ದರು ಎಂದರೆ ಸರಿಯಲ್ಲ, ದೊಡ್ಡ ಶರಣಪ್ಪನ ತಾಯಿ ಸೂಗಮ್ಮ ಎಂದರೆ ನನಗೆ ಸೂಗಮ್ಮ ಯಾರು ಎಂದು ಗೊತ್ತಿಲ್ಲ, ದೊಡ್ಡ ಶರಣಪ್ಪನ ತಂದೆ ಶರಣಬಸಪ್ಪ @ ಬಸಪ್ಪ ಎಂದರೆ ಸರಿಯಲ್ಲ, ದೊಡ್ಡ ಶರಣಪ್ಪನ ಮಗಳು ಪಾರ್ವತಮ್ಮ ಎಂದರೆ ಸರಿಯಲ್ಲ, ಈರಮ್ಮಳಿಗೆ ಮಾಹದೇವಪ್ಪ ಮತ್ತು ಸಿದ್ರಾಮಪ್ಪ ಇಬ್ಬರು ಮಕ್ಕಳು ಎಂದರೆ ನನಗೆ ಗೊತ್ತಿಲ್ಲ, ಮಾಹಾದೇವಪ್ಪ ತೀರಿಹೋಗಿದ್ದು ಆತನ ಮಗ 2ನೇ ವಾದಿ ಎಂದರೆ ಸರಿಯಲ್ಲ, ನನ್ನ ಪ್ರತಿವಾದಿ ಪತ್ರದಲ್ಲಿ ಮತ್ತು ನನ್ನ ಮುಖ್ಯ ವಿಚಾರಣಾ ಪ್ರಮಾಣ ಪತ್ರದಲ್ಲಿ ವಾದಿಯರು ನಮಗೆ ಸಂಬಂಧ ಇಲ್ಲ ಎಂದು ಹೇಳಿ ಬರೆಸಿಲ್ಲ ಎಂದರೆ ಸರಿಯಲ್ಲ, ಅವರು ನಮಗೆ ಸಂಬಂಧಿಕರು ಆಗಿರುವ ಕಾರಣ ಆರೀತಿ ಹೇಳಿ ಬರೆಸಿಲ್ಲ ಎಂದರೆ ಸರಿಯಲ್ಲ,

ದಾವಾ ಸ್ವತ್ತುಗಳು ಬಸಪ್ಪ ತಂದೆ ಬಸಪ್ಪನಿಗೆ ಸೇರಿತ್ತು ಎಂದರೆ ನನ್ನ ತಾತ ಬಸಪ್ಪ ತಂದೆ ಬಸಪ್ಪನಿಗೆ ಸೇರಿತ್ತು ಎಂದು ಹೇಳುತ್ತಾರೆ. ಬಸಪ್ಪ ತಂದೆ ಬಸಪ್ಪ ತೀರಿಹೋದ ನಂತರ ಆತನ ಹೆಣ್ಣು ಮಕ್ಕಳಾದ ಸುಗಮ್ಮ ಮತ್ತು ಈರಮ್ಮ ಮತ್ತು ಅವರ ವಾರಸುದಾರರ ನಡುವೆ ಇಲ್ಲಿಯವರೆಗೆ ಭಾಗ ಆಗಿಲ್ಲ ಎಂದರೆ ಸರಿಯಲ್ಲ, ಸಾಕ್ಷಿ ಮುಂದುವರೆದು ಅವರು ನಮಗೆ ಸಂಬಂಧ ಇಲ್ಲ ಎಂದು ಹೇಳುತ್ತಾರೆ. ದಾವಾ ಸ್ವತ್ತುಗಳು ಬಸಪ್ಪ ತಂದೆ ಬಸಪ್ಪನಿಂದ

ನೀಲಮ್ಮಳಿಗೆ ನೀಲಮ್ಮನಿಂದ ಸುಗಮ್ಮ ಮತ್ತು ಈರಮ್ಮ ರವರಿಗೆ ಬಂದಿದ್ದು ಅವರೇ ಉಳುವೆ ಮಾಡುತ್ತಾ ಬಂದಿದ್ದಾರೆ ಎಂದರೆ ಸರಿಯಲ್ಲ. ವಾದಿಯರು ನನ್ನ ಸಂಬಂಧಿಕರು ಇದ್ದರು ಕೂಡ ದಾವಾ ಸ್ವತ್ತುಗಳಲ್ಲಿ ಭಾಗ ಕೊಡಬಾರದು ಎಂಬ ಉದ್ದೇಶದಿಂದ ನನ್ನ ಸಂಬಂಧಿಕರು ಅಲ್ಲ ಎಂದು ಸುಳ್ಳು ಹೇಳುತ್ತಿದ್ದೇನೆ ಎಂದರೆ ಸರಿಯಲ್ಲ.

ಬಸಪ್ಪ ತಂದೆ ಬಸಪ್ಪ ತೀರಿಹೋದ ನಂತರ ದಾವಾ ಸ್ವತ್ತಗುಳ ಕಂದಾಯ ದಾಖಲಾತಿಗಳಲ್ಲಿ ನಾಮಕವಾಸ್ತೆ ಮಾತ್ರ ಬೇರೆಯವರ ಹೆಸರಿಗೆ ಮುಟೇಷನ ಆಗುತ್ತಾ ಬಂದಿವೆ ಎಂದರೆ ಸರಿಯಲ್ಲ. ಸಾಕ್ಷಿ ಮುಂದುವರೆದು  ನಾವು ಸರ್ವೆ ನಂಬರ 110 ರ ಜಮೀನು ಮಾರಾಟ ಮಾಡಿದಾಗ 1ನೇ ವಾದಿ ಮತ್ತು ಮಹಾದೇವಪ್ಪ ಖರೀದಿ ಪತ್ರಕ್ಕೆ ಸಾಕ್ಷಿದಾರರಾಗಿ ಸಹಿ ಮಾಡಿದ್ದಾರೆ ಎಂದು ಹೇಳುತ್ತಾರೆ. ದಾವಾ ಸ್ವತ್ತುಗಳಲ್ಲಿ ವಾದಿಯರಿಗೆ ಮತ್ತು ಪ್ರತಿವಾದಿಯರಿಗೆ ಹಕ್ಕು ಇರುವ ಕಾರಣ ಎಲ್ಲರು ಸೇರಿ ಮಾರಾಟ ಮಾಡಿದ್ದೇವೆ ಎಂದರೆ ಸರಿಯಲ್ಲ. ದಾವಾ ಸ್ವತ್ತುಗಳಿಗೆ ವಾದಿಯರು ಸಂಬಂಧ ಇರುವ ಕಾರಣ ಖರೀದಿ ಪತ್ರಕ್ಕೆ ಅವರ ಸಹಿ ಪಡೆದಿದ್ದೇವೆ ಎಂದರೆ ಸರಿಯಲ್ಲ. ಕುಟುಂಬಕ್ಕೆ ಕಾನೂನು ಬದ್ದ ಅವಶ್ಯಕತೆ ಇದ್ದ ಕಾರಣ ವಾದಿಯರು ಮತ್ತು ಪ್ರತಿವಾದಿಯರು ಕೂಡಿಕೊಂಡು ಜಮೀನು ಮಾರಾಟ ಮಾಡಿರುವ ಕಾರಣ ಸದರಿ ಖರಿದಿ ಪತ್ರಗಳನ್ನು ವಾದಿಯರು ಈ ದಾವೆಯಲ್ಲಿ ಪ್ರಶ್ನೇ ಮಾಡಿಲ್ಲ ಎಂದರೆ ಸರಿಯಲ್ಲ. ಸಾಕ್ಷಿ ಮುಂದುವರೆದು  ವಾದಿಯರ ಜಮೀನುಗಳು ಬೇರೆ ಇವೆ ಎಂದು ಹೇಳುತ್ತಾರೆ. 2005 ರಲ್ಲಿ ಇಬ್ಬರು ಸೇರಿ ಜಮೀನುಗಳು ಮಾರಾಟ ಮಾಡಿದ್ದೇವೆ ಎಂದರೆ ಸರಿಯಲ್ಲ.

ಬಸಪ್ಪ ತಂದೆ ಬಸಪ್ಪ 1983 ರಲ್ಲಿ ವಿಲ್ ಮಾಡಿದ್ದಾರೆ. ವಿಲ್ ಬಗ್ಗೆ ಪ್ರತಿವಾದ ಪತ್ರದಲ್ಲಿ ಹೇಳಿ ಬರೆಸಿದ್ದೇನೆ. ನನ್ನ ಪ್ರತಿವಾದಿ ಪತ್ರದಲ್ಲಿ ವಿಲ್ ಬಗ್ಗೆ ಹೇಳಿಲ್ಲ ಎಂದರೆ ಸರಿಯಲ್ಲ. ನಾನು ಹಾಜರುಪಡಿಸಿರುವ ವಿಲ್ ಮೂಲ ಪ್ರತಿಯಲ್ಲ ಅದು ದೃಢಿಕೃತ ನಕಲು ಎಂದರೆ ಸರಿ. ವಿಲ್ ನ ಮೂಲ ಪ್ರತಿ ನಮ್ಮ ಮನೆಯಲ್ಲಿದೆ. ಅದನ್ನು ನ್ಯಾಯಾಲಯಕ್ಕೆ ಹಾಜರುಪಡಿಸಲು ತೊಂದರೆ ಇಲ್ಲ. ವಿಲ್ ಪ್ರಕಾರ ಮುಟೇಷನ ಆಗಿದೆ. ಸದರಿ ಮುಟೇಷನ ಅನ್ನು ನಾನು ನ್ಯಾಯಾಲಯಕ್ಕೆ ಹಾಜರುಪಡಿಸಿಲ್ಲ. ವಿಲ್ ಪ್ರಕಾರ ಮಟೇಷನ ಆಗಿಲ್ಲ ಕಾರಣ ಸದರಿ ಮುಟೇಷನ ಹಾಜುರುಪಡಿಸಿಲ್ಲ ಎಂದರೆ ಸರಿಯಲ್ಲ. ವಿಲ್ ಮೇಲೆ ಸಾಕ್ಷಿದಾರರಾಗಿ ಯಾರು ಸಹಿ ಮಾಡಿದ್ದಾರೆ ನಾನು ಗಮನಿಸಿಲ್ಲ.

OS No. 88/2022

DW-1

ಬಸವರಾಜ ತಂದೆ ಮಹಾದೇವಪ್ಪ, ಮಾಹಾದೇಮ್ಮ ಗಂಡ ಸಿದ್ರಾಮಪ್ಪ ಇವರಿಬ್ಬರು ಬಸಪ್ಪ ತಂದೆ ಬಸಪ್ಪನಿಗೆ ಮತ್ತು ದಾವಾ ಸ್ವತ್ತುಗಳಿಗೆ ಸಂಬಂಧಪಟ್ಟಿಲ್ಲ ಎಂದರೆ ಸರಿ. ವಾದಿಯರು ಮತ್ತು ಪ್ರತಿವಾದಿಯರು ಸಂಬಂಧ ಇಲ್ಲದೆ ಇರುವ ಕಾರಣ ನಮ್ಮ ನಡುವೆ ಭಾಗ ಆಗಿಲ್ಲ. ವಾದಿ ಮತ್ತು ಪ್ರತಿವಾದಿಯರು 50 ವರ್ಷಗಳ ಹಿಂದೆ ಭಾಗ ಮಾಡಿಕೊಂಡಿದ್ದೇವೆ ಎಂದು ಹೇಳಿ ಬರೆಸಿಲ್ಲ. 50 ವರ್ಷಗಳ ಹಿಂದೆ ಆಗಿದ್ದು ನನಗೆ ಗೊತ್ತಿಲ್ಲ ಎಂದರೆ ಸರಿಯಲ್ಲ. ಸಾಕ್ಷಿ ಮುಂದುವರೆದು ನನ್ನ ತಾಯಿ ಮತ್ತು ದೊಡ್ಡಮ್ಮ ರವರು ಹೇಳಿದ ಮೇರೆಗೆ ನನಗೆ ಗೊತ್ತು ಎಂದು ಹೇಳುತ್ತಾರೆ. ನನ್ನ ತಾಯಿ ಮತ್ತು ದೊಡ್ಡಮ್ಮ ನ್ಯಾಯಾಲಯಕ್ಕೆ ಬಂದರೆ ಸುಳ್ಳು ಹೇಳಲು ಆಗುವುದಿಲ್ಲ ಕಾರಣ ನಾನು ಬಂದು ಸುಳ್ಳು ಹೇಳುತ್ತಿದ್ದೇನೆ ಎಂದರೆ ಸರಿಯಲ್ಲ. ಬಸಪ್ಪ ತಂದೆ ಬಸಪ್ಪ ನ ಸ್ವತ್ತಗಳಲ್ಲಿ ಆತನ ಮಕ್ಕಳಾದ ಸುಗಮ್ಮ ಈರಮ್ಮ ಮತ್ತು ಅವರ ವಾರಸುದಾರರು ಕಾನೂನು ಬದ್ದ ವಿಭಾಗ ಮಾಡಿಕೊಂಡಿಲ್ಲ ಎಂದರೆ ನನಗೆ ಗೊತ್ತಿಲ್ಲ. ಸಾಕ್ಷಿ ಮುಂದುವರೆದು ನನಗೆ ಅವರು ಸಂಬಂಧ ಇಲ್ಲ ಎಂದು ಹೇಳುತ್ತಾರೆ. 1ನೇ ವಾದಿ ಈರಮ್ಮಳ ಮಗ. 2ನೇ ವಾದಿ ಈರಮ್ಮಳ ಮೊಮ್ಮಗ ಎಂದರೆ ನನಗೆ ಗೊತ್ತಿಲ್ಲ. ಈರಮ್ಮ ಮತ್ತು ಸುಗಮ್ಮಳ ನಡುವೆ ಭಾಗ ಆಗಿಲ್ಲ. ಪ್ರತಿವಾದಿಯರು ಸುಗಮ್ಮಳ ವಂಶಸ್ಥರು ಆಗಿರುವ ಕಾರಣ ವಾದಿಯರಿಗೆ ದಾವಾ ಜಮೀನುಗಳಲ್ಲಿ ಅರ್ಧ ಭಾಗ ಇದೆ ಎಂದರೆ ಸರಿಯಲ್ಲ.

ದಾವಾ ಜಮೀನುಗಳು ಸರ್ವೆ ನಂಬರ ನನಗೆ ಗೊತ್ತು. ದಾವಾ ಜಮೀನುಗಳು ಮೂಲತಃ ಬಸಪ್ಪ ತಂದೆ ಬಸಪ್ಪನಿಗೆ ಸೇರಿತ್ತು ಎಂದರೆ ಸರಿ . ಬಸಪ್ಪ ತಂದೆ ಬಸಪ್ಪನಿಗೆ ದಾವಾ ಜಮೀನುಗಳನ್ನು ಹೊರತು ಪಡಿಸಿ ಸರ್ವೆ ನಂಬರ 83 ರಲ್ಲಿ ಜಮೀನು ಇತ್ತು.

**(ವಾದಿ ಪರ ವಕೀಲರ ವಿನಂತಿ ಮೇರೆಗೆ ಮುಂದುವರೆದ ಪಾಟೀ ಸವಾಲಿಗೆ ಮುಂದೂಡಲಾಯಿತು)**

(ತೆರೆದ ನ್ಯಾಯಾಲಯದಲ್ಲಿ ನನ್ನ ಉಕ್ತ ಲೇಖನಕ್ಕೆ ಬೆರಳಚ್ಚು ಮಾಡಿಸಲಾಯಿತು)

**ಓ.ಹೇ.ಕೇ. ಸರಿ ಇದೆ.**

**ಹಿರಿಯ ಸಿವಿಲ್ ನ್ಯಾಯಾಧೀಶರು,**

**ಸೇಡಂ.**